## ಕೆ.ಎ.ಎಸ್.ಪೂರ್ವಭಾವಿ ಪರೀಕ್ಷೆ-2006

## ಸಾಮಾನ್ಯ ಅಧ್ಯಯನ

1. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಾಗಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿ

**ನಿಶ್ಚಿತ ಹೇಳಿಗೆ (A):** ಬೊರೊಬುದೂರ್ ನಲ್ಲಿರುವ ಬೌದ್ಧ ಸ್ತೂಪವು ಇತ್ತೀಚೆಗೆ ಅನೇಕೆ ನಷ್ಟಗಳಿಗೆ ತುತ್ತಾಗಿದೆ

**ಕಾರಣ (R):** ಇಂಡೋನೇಷಿಯಾ ಇತ್ತೀಚೆಗೆ ಭೂಕಂಪದ ಹಾವಳಿಗೆ ತುತ್ತಾಯಿತು.

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿಯಿದೆ , ಆದರೆ R ತಪ್ಪಾಗಿದೆ

(4) A ಮತ್ತು R ಎರಡೂ ತಪ್ಪು

(ಉತ್ತರ:-1)

2. ಕೆಳಗಿನ I (ಸಾಹಿತಿಗಳು) ಮತ್ತು II (ಅವರ ಕೃತಿಗಳು) ಪಟ್ಟಿಗಳನ್ನು ಹೋಲಿಸಿ, ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ:

| ಪಟ್ಟಿ -I | ಪಟ್ಟಿ-II |
|---|---|
| a. ಡಾನ್ ಬ್ರೌನ್ | 1. ದಿ ಗೈಡ್ |
| b. ಸ್ಟೀಫನ್ ಹಾಕಿಂಗ್ | 2. ಹ್ಯಾರಿ ಪಾಟರ್ |
| c. ರಾಜಾರಾವ್ | 3. ಡಿಜಿಟಲ್ ಫೋರ್ಟ್ರೆಸ್ |
| d. ಸಲ್ಮಾನ್ ರಶ್ದಿ | 4. ಬ್ರೀಫ್ ಹಿಸ್ಟರಿ ಆಫ್ ಟೈಮ್ |
| | 5. ಸರ್ಪೆಂಟ್ ಅಂಡ್ ದಿ ರೋಪ್ |
| | 6. ಪಾಲಿಮಾರ್ ಅಂಡ್ ದಿ ಕ್ಲೌನ್ |

**ಸಂಕೇತಗಳು:**

| | a | b | c | d |
|---|---|---|---|---|
| (1) | 4 | 2 | 1 | 3 |
| (2) | 2 | 3 | 4 | 1 |
| (3) | 2 | 1 | 6 | 5 |
| (4) | 3 | 4 | 5 | 6 |

(ಉತ್ತರ:-4)

3. 2005ರಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದವರು

(1) ಅಚ್ಯುತಾನಂದನ್

(2) ಕೋಕಿಲಾ ಬೆಹನ್

(3) ಡಿ.ಜಯಕಾಂತನ್

(4) ವಿಕ್ರಮ್ ಸೇಠ್

(ಉತ್ತರ:-3)

4. ಅತ್ಯಂತ ಶಕ್ತಿಯುತವಾದ ರೇಡಿಯೊ ಟೆಲಿಸ್ಕೋಪ್ Giant Meterwave Radio Telescope (GMRT) ಎಲ್ಲಿದೆ

(1) ತಿರುವನಂತಪುರಂ

(2) ಪುಣೆಯ ಬಳಿ ನಾರಾಯಣಗಾಂವ್

(3) ಊಟಿ

(4) ನೈನಿತಾಲ್

(ಉತ್ತರ:-2)

5. ಕೆಳಕಂಡ ಯಾವ ವಸ್ತುವನ್ನು ಅಭಿವೃದ್ಧಿಪಡಿಸಿರುವುದಾಗಿ ಭಾರತೀಯ ವಿಜ್ಞಾನಿಗಳು ಇತ್ತೀಚೆಗೆ ಹೇಳಿಕೊಂಡಿದ್ದಾರೆ

(1) ಹಕ್ಕಿ ಜ್ವರಕ್ಕೆ ಲಸಿಕೆ

(2) ಚಿಕುನ್ ಗುನ್ಯಾಗೆ ಆ್ಯಂಟಿಬಯೋಟಿಕ್

(3) ಸಾರ್ಸ್ (SARS) ಗೆ ಲಸಿಕೆ

(4) ಡೆಂಗ್ಯೂ ಜ್ವರಕ್ಕೆ ಒಂದು ಆ್ಯಂಟಿಬಯೋಟಿಕ್

(ಉತ್ತರ:-1)

6. ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಈಗಿನ ಅಧ್ಯಕ್ಷರು ಮತ್ತು ನಿರ್ದೇಶಕರು ಅನುಕ್ರಮವಾಗಿ

(1) ಎ.ಪಿ.ಜೆ.ಅಬ್ದುಲ್ ಕಲಾಂ, ಡಾ.ವೇಣುಗೋಪಾಲ್

(2) ಡಾ.ರಾಮದಾಸ್, ಡಾ.ವೇಣುಗೋಪಾಲ್

(3) ಅರ್ಜುನ್ ಸಿಂಗ್, ಡಾ.ರಾಮದಾಸ್

(4) ಡಾ.ಮನಮೋಹನ್ ಸಿಂಗ್, ಡಾ.ರಾಮದಾಸ್

(ಉತ್ತರ:-2)

7. ಜಗತ್ತಿನ ಅತಿ ಎತ್ತರದ ಹಾಗೂ ಅತಿ ಉದ್ದದ ಹೈಲ್ಯಾಂಡ್ ರೈಲ್ವೆ ಎಲ್ಲಿದೆ

(1) ಟಿಬೆಟ್ ನ ಪ್ರಸ್ಥಭೂಮಿ

(2) ಪೆರುವಿನ ಆ್ಯಂಡಿಸ್

(3) ರಷ್ಯಾದ ಊರಾಹ್

(4) ಸ್ವಟ್ಜರ್ ಲ್ಯಾಂಡ್ (ಉತ್ತರ:-1)

8. ಲಿಬರಾನ್ ಅಯೋಗವು ಯಾವುದರ ಬಗ್ಗೆ ತನಿಖೆ ನಡೆಸಿತು

(1) ಕ್ರಿಕೆಟ್ ಮ್ಯಾಚ್ ಫಿಕ್ಸಿಂಗ್

(2) ಬೆಸ್ಟ್ ಬೇಕರಿ ಪ್ರಕರಣ

(3) ತೆಹಲ್ಕಾ ಟೇಪ್ ಪ್ರಕರಣ

(4) ಅಯೋಧ್ಯೆಯ ವಿವಾದಿನ ಕಟ್ಟಡವನ್ನು ಕೆಡವಿದ್ದು

(ಉತ್ತರ:-4)

9. ಇತ್ತೀಚೆಗೆ ಸುದ್ದಿಯಲ್ಲಿದ್ದ ಭಾರತದ ಮೊದಲ ಆಧುನಿಕ ಹಗುರ ಹೆಲಿಕಾಪ್ಟರ್

(1) ಧ್ರುವ

(2) ಆಕಾಶ್

(3) ಪತಂಗ್

(4) ಬಸಂತ್

(ಉತ್ತರ:-1)

10. ಪ್ರಸಾರ ಭಾರತಿಯ ಪ್ರಸ್ತುತ CEO ಯಾರು

(1) ಮುಕುಟ್ ಮೈಥಿ

(2) ಎಂ.ವಿ.ಕಾಮತ್

(3) ಪ್ರದೀಪ್ ಸಿಂಗ್

(4) ಬಿ.ಬಿ.ಟೆಂಡನ್

(ಉತ್ತರ:-1)

11. ಭಾರತದ ಮಾನವರಹಿತ ಚಂದ್ರಯಾನ-1ರ ಖಗೋಳ ವಾಹನದಲ್ಲಿ ಪೇಲೋಡ್ ಗಳನ್ನು ಕಳಿಸಲು ಕೆಳಕಂಡ ಯಾವ ದೇಶವು ಸಹಿ ಮಾಡಿದೆ

(1) ಯು.ಎಸ್.ಎ

(2) ಯು.ಕೆ

(3) ಸ್ಪೇನ್

(4) ಫ್ರಾನ್ಸ್

(ಉತ್ತರ:-1)

ಕನ್ನಡ ದೀಪ

12. ಭಾರತ ಮತ್ತು ಚೀನಾದ ನಡುವಿನ ಯಾವ ಗಡಿ ವ್ಯಾಪಾರ ಕೇಂದ್ರಗಳನ್ನು ನಾಲ್ಕು ದಶಕಗಳಿಗೂ ಹೆಚ್ಚು ಕಾಲದ ನಂತರ 2006 ರ ಜುಲೈ 6 ರಂದು ಆರಂಭಿಸಲಾಗಿದೆ

a. ಸಿಕ್ಕಿಂನಲ್ಲಿರುವ ನಾಥುಲಾ ಪಾಸ್

b. ಉತ್ತರಾಂಚಲದಲ್ಲಿರುವ ಲಿಪುಲೆಖ್ ಪಾಸ್

c. ಹಿಮಾಚಲ ಪ್ರದೇಶದಲ್ಲಿರುವ ಷಿಪ್ಕಿಲಾ

ಸರಿ ಉತ್ತರವನ್ನು ಆಯ್ಕೆಮಾಡಿ:

(1) a ಮಾತ್ರ

(2) b ಮಾತ್ರ

(3) c ಮಾತ್ರ

(4) b ಮತ್ತು c

(ಉತ್ತರ:-1)

13. ಕೆಳಗಿನ ಜೋಡಿಗಳಲ್ಲಿ ಯಾವುದರ ಹೊಂದಾಣಿಕೆ ತಪ್ಪಾಗಿದೆ

| | ಕಂಪನಿ | | ಉತ್ಪಾದನಗಳು |
|---|---|---|---|
| (1) | ಸಾಮ್ ಸೋನೈಟ್ | --- | ಗಡಿಯಾರಗಳು |
| (2) | ಗಂಜಾಮ್ | --- | ವಜ್ರಗಳು |
| (3) | ಫಾನ್ ಹ್ಯೂಸೆನ್ | --- | ಉಡುಪು |
| (4) | ಸ್ಯಾಮ್ ಸಂಗ್ | --- | ಎಲೆಕ್ಟ್ರಾನಿಕ್ಸ್ |

(ಉತ್ತರ:-1)

14. ಯಾವ ರಾಜ್ಯವು ಇನ್ನೂ VAT ಅನ್ನು ಜಾರಿಗೊಳಿಸಿಲ್ಲ

(1) ಹರಿಯಾಣ

(2) ಮಹಾರಾಷ್ಟ್ರ

(3) ತಮಿಳುನಾಡು

(4) ಕರ್ನಾಟಕ

(ಉತ್ತರ:-3)

15. ಜನೀವಾದಲ್ಲಿ 2006 ರ ಜುಲೈ 1 ರಂದು ಕೃಷಿ ಮತ್ತು ಕೈಗಾರಿಕಾ ಟಾರಿಫ್ ಕುರಿತಂತೆ ವಿಶ್ವ ವ್ಯಾಪಾರ ಸಂಸ್ಥೆ (WTO) ಯಲ್ಲಿ ನಡೆದ ದೋಹ ಸುತ್ತಿನ ಮಾತುಕಥೆಗಳು ಕೆಳಕಂಡ ಯಾವ ದೇಶಗಳ ನಡುವಿನ ಭಿನ್ನಾಭಿಪ್ರಾಯದಿಂದಾಗಿ ತಟಸ್ಥಗೊಂಡವು

a. EU ಮತ್ತು US

b. EU ಮತ್ತು ಭಾರತ ಹಾಗೂ ಬ್ರೆಜಿಲ್ ನೇತೃತ್ವದ G-20 ಗುಂಪು

c. US ಮತ್ತು ಭಾರತ ಹಾಗೂ ಬ್ರೆಜಿಲ್ ನೇತೃತ್ವದ G-20 ಗುಂಪು

ಸರಿ ಉತ್ತರಗಳನ್ನು ಆಯ್ಕೆಮಾಡಿ:

(1) a ಮತ್ತು b

(2) b ಮತ್ತು c

(3) a ಮತ್ತು c

(4) a, b ಮತ್ತು c

(ಉತ್ತರ:-3)

16. 2006ರಲ್ಲಿ "ಮಿಸ್ ಯೂನಿವರ್ಸ್" ಕಿರೀಟ ಧರಿಸಿದವರು

(1) ಸ್ವಿಟ್ಜರ್ ಲ್ಯಾಂಡಿನ ಲಾರಿನ್ ಗಿಲಿರೊನ್

(2) ಜಪಾನಿನ ಕುರಾರ ಚಿಬಾನ

(3) ಪೋರ್ಟೋರಿಕಾದ ಜುಲೈಕಾ ರಿವೆರಾ ಮೆಂಡೋಜ

(4) ಯು.ಎಸ್.ಎ.ನ ಟಾರಾ ಕೊನರ್

(ಉತ್ತರ:-3)

17. ಭಾರತದ ಮೊದಲ ಬೌದ್ಧಿಕ ಆಸ್ತಿ ಹಕ್ಕಿನ ಶಾಲೆ (Rajiv Gandhi School of Intellectual Property Law) ಅನ್ನು ಎಲ್ಲಿ ಆರಂಭಿಸಲಾಗಿದೆ

(1) IIT, ಖರಗ್ ಪುರ

(2) IIM, ಬೆಂಗಳೂರು

(3) IIM, ಅಹಮದಾಬಾದ್

(4) ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ, ಬೆಂಗಳೂರು

(ಉತ್ತರ:-1)

18. ಸಂಸತ್ತಿನ (ಅನರ್ಹತೆಯ ತಡೆ) ತಿದ್ದುಪಡಿ ವಿಧೇಯಕವು (ಲಾಭದಾಯಕ ಹುದ್ದೆಯ ವಿಧೇಯಕ ಎಂಬ ಜನಪ್ರಿಯ ಹೆಸರು) ಎಷ್ಟು ಪದವಿಗಳಿಗೆ ವಿನಾಯಿತಿ ನೀಡಬೇಕೆಂದು ಪ್ರಸ್ತಾಪಿಸಿದೆ

(1) 65

(2) 50

(3) 56

(4) 75

(ಉತ್ತರ:-3)

19. ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರು 2006ರ ಜುಲೈ ತಿಂಗಳಲ್ಲಿ ನೊಂದ ರೈತರಿಗಾಗಿ 3750 ಕೋಟಿ ರೂ.ಗಳನ್ನು "ಪರಿಹಾರ ಪ್ಯಾಕೆಜ್"ನ್ನು ಘೋಷಿಸಿದರು. ಇದನ್ನು ಯಾರ ರಾಜ್ಯದ ಜಿಲ್ಲೆಗಳಿಗೆ ಕೊಡಲಾಗಿದೆ

(1) ಕರ್ನಾಟಕ್ದ ಆರು ಜಿಲ್ಲೆಗಳು

(2) ಮಹಾರಾಷ್ಟ್ರದ ಆರು ಜಿಲ್ಲೆಗಳು

(3) ಆಂಧ್ರಪ್ರದೇಶದ ಹದಿನಾರು ಜಿಲ್ಲೆಗಳು

(4) ಕೇರಳದ ಮೂರು ಜಿಲ್ಲೆಗಳು

(ಉತ್ತರ:-2)

20. ವಿಶ್ವಬ್ಯಾಂಕ್ ಕೆಳಕಂಡ ಯಾವ ಉದ್ದೇಶಕ್ಕಾಗಿ 2006 ರ ಜೂನ್ ತಿಂಗಳಲ್ಲಿ ಕರ್ನಾಟಕ ರಾಜ್ಯಕ್ಕೆ 120 ಮಿಲಿಯನ್ ಡಾಲರ್ ಸಾಲ ನೀಡಿಕೆಯನ್ನು ಅನುಮೋದಿಸಿದೆ

(1) ಮುನಿಸಿಪಲ್ ಸುಧಾರಣೆಗಳು

(2) ಗ್ರಾಮೀಣ ನೀರು ಸರಬರಾಜು

(3) ಕರ್ನಾಟಕದ ಪಂಚಾಯಿತಿಗಳನ್ನು ಬಲಪಡಿಸುವ ಪರಿಯೋಜನೆ

(4) ರಾಜ್ಯದ ಹೆದ್ದಾರಿಗಳು

(ಉತ್ತರ:-3)

21. ಕೇಂದ್ರ ಮಾರಾಟ ತೆರಿಗೆಯು

(1) ಕೇಂದ್ರ ಸರ್ಕಾರವು ವಿಧಿಸುವ ಸಂಗ್ರಹಿಸುವ ಮತ್ತು ತನ್ನಲ್ಲೇ ಉಳಿಸಿಕೊಳ್ಳುವ ಪರೋಕ್ಷ ತೆರಿಗೆ

(2) ರಾಜ್ಯ ಸರ್ಕಾರವು ವಿಧಿಸುವ, ಸಂಗ್ರಹಿಸುವ ಮತ್ತು ತನ್ನಲ್ಲೇ ಉಳಿಸಿಕೊಳ್ಳುವ ಪರೋಕ್ಷ ತೆರಿಗೆ

(3) ಕೇಂದ್ರ ಸರ್ಕಾರವು ವಿಧಿಸುವ ಮತ್ತು ಸಂಗ್ರಹಿಸುವ ಪರೋಕ್ಷ ತೆರಿಗೆ

(4) ಕೇಂದ್ರ ಸರ್ಕಾರವು ವಿಧಿಸುವ, ಆದರೆ ರಾಜ್ಯ ಸರ್ಕಾರವು ಸಂಗ್ರಹಿಸುವ ಮತ್ತು ತನ್ನಲ್ಲೇ ಉಳಿಸಿಕೊಳ್ಳುವ ಪರೋಕ್ಷ ತೆರಿಗೆ

(ಉತ್ತರ:-4)

22. ಭಾರತದ ಯೋಜನಾ ದಸ್ತಾವೇಜು ಪತ್ರವನ್ನು ಅನುಮೋದಿಸುವ ಉನ್ನತ ನಿಕಾಯ

(1) ಯೋಜನಾ ಆಯೋಗ

(2) ಕೇಂದ್ರೀಯ ಸಮೂಹ (The Core Group)

(3) ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

(4) ಕೇಂದ್ರ ಸರ್ಕಾರದ ಸಚಿವ ಸಂಪುಟ

(ಉತ್ತರ:-3)

23. ಉತ್ತರ ಅಮೆರಿಕ ಮುಕ್ತ ವ್ಯಾಪಾರ ಒಪ್ಪಂದವು (NAFTA) ಕೆಳಕಂಡ ಯಾವ ದೇಶದ ಮುಕ್ತ ವ್ಯಾಪಾರ ಪ್ರದೇಶಕ್ಕೆ ಸಂಬಂಧಿಸಿದೆ

(1) ಯು.ಎಸ್.ಎ., ಕೆನಡಾ, ಯು.ಕೆ.

(2) ಯು.ಎಸ್.ಎ., ಕೆನಡಾ, ರಷ್ಯಾ

(3) ಯು.ಎಸ್.ಎ. ಕೆನಡಾ, ಮೆಕ್ಸಿಕೊ

(4) ಕೆನಡಾ, ಮೆಕ್ಸಿಕೊ, ಯು.ಕೆ.

(ಉತ್ತರ:-3)

24. ಕೆಳಗಿನವುಗಳಲ್ಲಿ ಯಾವುದು ವಿಶೇಷ ಆರ್ಥಿಕ ವಲಯದ ಸ್ವರೂಪವಲ್ಲ

(1) ಕಸ್ಟಮ್ಸ್ ನವರಿಂದ ರಫ್ತು ಮತ್ತು ಆಮದು ಸರಕಿನ ನಿಯತ ತಪಾಸಣೆ

(2) ತಯಾರಿಕೆ ಕ್ಷೇತ್ರದಲ್ಲಿ ಸ್ವಯಂಚಾಲಿತ ಮಾರ್ಗದಿಂದ 100% ಪ್ರತ್ಯಕ್ಷ ಹೂಡಿಕೆ

(3) 5 ವರ್ಷಗಳವರೆಗೆ 100% ಆದಾಯ ತೆರಿಗೆ ವಿನಾಯಿತಿ

(4) ಸ್ವಯಂಚಾಲಿತ ಮಾರ್ಗದ ಮೂಲಕ ಹೊರಗಿನಿಂದ ವಾಣಿಜ್ಯ ಎರವಲು

(ಉತ್ತರ:-1)

25. 2001ರ ಜನಗಣತಿಯ ಪ್ರಕಾರ ಭಾರತದಲ್ಲಿ ಕಾರ್ಯ ಸಹಭಾಗಿತ್ವ ಪ್ರಮಾಣವು

(1) 38%

(2) 52%

(3) 39%

(4) 26%

(ಉತ್ತರ:-3)

26. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ (NREGA), 2005 ಕ್ಕೆ ಸಂಬಂಧಿಸಿದ ಕೆಳಕಂಡ ವಿವರಣೆಗಳನ್ನು ಪರಿಶೀಲಿಸಿ

a. ಈ ಅಧಿನಿಯಮದ ಅವಕಾಶಗಳ ಪ್ರಕಾರ ಕನಿಷ್ಠ ಮಜೂರಿಗೆ ಅಕುಶಲ ದೈಹಿಕ ಶ್ರಮದ ಕೆಲಸವನ್ನು ಮಾಡಲಿಚ್ಛಿಸುವ ಯಾವುದೇ ಗ್ರಾಮೀಣ ಕುಟುಂಬದ ವಯಸ್ಕ ವ್ಯಕ್ತಿಗಳಿಗೆ ಒಂದು ವರ್ಷದಲ್ಲಿ 100 ದಿನಗಳ ಕಾಲ ಉದ್ಯೋಗವನ್ನು ದೊರಕಿಸುವುದು ಕಾನೂನಿಕ ಹಕ್ಕಾಗಿದೆ

b. ಮಜೂರಿ;ಸಾಮಗ್ರಿ ಅನುಪಾತವು 40:60ಕ್ಕಿಂತ ಕಡಿಮೆ ಇರಬಾರದು

c. ಎಲ್ಲ ಸಂದರ್ಭಗಳಲ್ಲಿಯೂ ಹೆಂಗಸರಿಗೆ ಮತ್ತು ಗಂಡಸರಿಗೆ ಸಮಾನ ಮಜೂರಿ ನೀಡಬೇಕು

ಮೇಲಿನ ವಿವರಣೆಗಳಲ್ಲಿ ಯಾವುವು ಸರಿ ಅಲ್ಲ

(1) a ಮಾತ್ರ

(2) b ಮಾತ್ರ

(3) c ಮಾತ್ರ

(4) a, b ಮತ್ತು c

(ಉತ್ತರ:-2)

27. ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ದೃಷ್ಟಿಯಿಂದ 10ನೇ ಪಂಚವಾರ್ಷಿಕ ಯೋಜನೆಯ ದಸ್ತಾವೇಜು ಪತ್ರವು, ನೀತಿ ನಿಕ್ಷೇಪನವನ್ನು ಒಳಗೊಳ್ಳುವ ಕೆಲವು ದುಡಿಮೆ ಕೇಂದ್ರಿತ ವಲಯಗಳನ್ನು ಪ್ರಸ್ತಾಪಿಸಿದೆ, ಆ ವಲಯಗಳು ಯಾವುವು

a. ಆಹಾರ ಸಂಸ್ಕರಣೆ

b. ಸೇವಾ ವಲಯ

c. ಗ್ರಾಮೀಣ ಕೃಷಿಯೇತರ ಚಟುವಟಿಕೆಗಳು/ಕೈಗಾರಿಕೆಗಳು

d. ರಫ್ತು ಪ್ರವರ್ಧನ ಚಟುವಟಿಕೆಗಳು

ಮೇಲಿನವುಗಳಲ್ಲಿ ಯಾವುವು ಸರಿಯಾಗಿವೆ

(1) a, b ಮತ್ತು c

(2) b, c ಮತ್ತು d

(3) a, c ಮತ್ತು d

(4) a, b ಮತ್ತು d

(ಉತ್ತರ:-1)

28. ಕೆಳಕಂಡ ಯಾವ ವರ್ಷವನ್ನು ಆಧಾರ ವರ್ಷವನ್ನಾಗಿಟ್ಟುಕೊಂಡು ಜಿಡಿಪಿಯ ಹೊಸ ಸರಣಿಗಳನ್ನು ಚಾಲ್ತಿ ಬೆಲೆಗಳಲ್ಲಿ ಅಂದಾಜು ಮಾಡಲಾಗಿದೆ

(1) 1993-1994

(2) 1999-2000

(3) 2005-2006

(4) 1980-1981

(ಉತ್ತರ:-2)

29. 12 ನೇ ಹಣಕಾಸು ಆಯೋಗದ ಪ್ರಕಾರ ಹಂಚಿಕೊಳ್ಳಬಹುದಾದ ಕೇಂದ್ರ ತೆರಿಗೆಗಳ ನಿವ್ವಳ ಹುಟ್ಟುವಳಿಗಳಲ್ಲಿ ಈ ಕೆಳಗೆ ತೋರಿಸಿರುವ ಯಾವ ಅಳತೆಗೋಲು ಹಾಗೂ ಗುರುತ್ವಕ್ಕೆ ಅನುಗುಣವಾಗಿ ರಾಜ್ಯಗಳಿಗೂ ಒಂದು ಪಾಲು ಕೊಡಬೇಕಾಗಿದೆ

a. ಜನಸಂಖ್ಯೆ 30%

b. ಆದಾಯದ ಅಂತರ 50%

c. ವಿಸ್ತೀರ್ಣ 10%

d. ವಿತ್ತೀಯ ಶಿಸ್ತು 7.5%

ಮೇಲಿನವುಗಳಲ್ಲಿ ಯಾವುವು ಸರಿಯಾಗಿವೆ

(1) a, b ಮತ್ತು c

(2) b, c ಮತ್ತು d

(3) a, c ಮತ್ತು d

(4) a, b ಮತ್ತು d

(ಉತ್ತರ:-2)

30. ಸಂವಿಧಾನದ (73ನೇ ತಿದ್ದುಪಡಿ) ಅಧಿನಿಯಮ, 1992 ರಲ್ಲಿರುವ ಅಂಶಕ್ಕೆ ಸಂಬಂಧಿಸಿದಂತೆ ಕೆಳಗಿನ ಯಾವ ವಿವರಣೆಗಳು ಸರಿಯಾಗಿವೆ

a. ಗ್ರಾಮ, ತಾಲೂಕು ಮತ್ತು ಜಿಲ್ಲಾ ಮಟ್ಟಗಳಲ್ಲಿ ಪಂಚಾಯಿತಿಯ ಮೂರು ಹಂತಗಳಿರತಕ್ಕದ್ದು

b. ಪ್ರತಿಯೊಂದು ಹಂತದ ಪಂಚಾಯಿತಿಯ ಸ್ಥಾನಗಳನ್ನು ಈ ಉದ್ದೇಶಕ್ಕಾಗೆ ಗುರುತು ಮಾಡಲಾಗಿರುವ ಪ್ರಾದೇಶಿಕ ಮತಕ್ಷೇತ್ರಗಳಿಂದ ನಾಮನಿರ್ದೇಶನದ ಮೂಲಕವೇ ತುಂಬತಕ್ಕದ್ದು

c. ಪಂಚಾಯಿತಿಯ ಅಧಿಕಾರವಧಿಯು 5 ವರ್ಷಗಳಾಗಿರತಕ್ಕದ್ದು

(1) a ಮಾತ್ರ (3) a ಮತ್ತು b

(2) a, b ಮತ್ತು c (4) a ಮತ್ತು c

(ಉತ್ತರ:-4)

31. WTO ದ ಸೇವೆಗಳ ವ್ಯಾಪಾರ ಕುರಿತ ಸಾಮಾನ್ಯ ಒಪ್ಪಂದ (GATS) ವು ಸೇವೆಗಳ ಸರಬರಾಜಿನ ಪ್ರಕಾರಗಳನ್ನು ಹೀಗೆ ವರ್ಗೀಕರಿಸಿದೆ

(1) 2 ಪ್ರಕಾರಗಳು

(2) 3 ಪ್ರಕಾರಗಳು

(3) 4 ಪ್ರಕಾರಗಳು

(4) 5 ಪ್ರಕಾರಗಳು

(ಉತ್ತರ:-3)

32. 2001 ರ ಜನಗಣತಿಯ ಪ್ರಕಾರ ಕೆಳಗಿನ ಯಾವ ರಾಜ್ಯದಲ್ಲಿ ಪುರುಷ ಮತ್ತು ಸ್ತ್ರೀಯರ ಸಾಕ್ಷರತೆಯ ಅಂತರ ಅತಿ ಕಡಿಮೆ ಇದೆ

(1) ಕೇರಳ

(2) ಮಿಜೋರಮ್

(3) ಮಹಾರಾಷ್ಟ್ರ

(4) ಕರ್ನಾಟಕ

(ಉತ್ತರ:-2)

33. ಕರ್ನಾಟಕದ 2006-07 ರ ಬಜೆಟ್ಟಿನಲ್ಲಿ "ಸುವರ್ಣ ಸುರಕ್ಷ ಯೋಜನೆ" ಎಂಬ ವಿಮಾ ಯೋಜನೆಯನ್ನು ಯಾರ ಸೌಲಭ್ಯಕ್ಕಾಗಿ ಪ್ರಕಟಿಸಲಾಗಿದೆ

(1) ಕೃಷಿ ಕಾರ್ಮಿಕರು

(2) ಪ.ಜಾತಿ ಮತ್ತು ಪ.ಪಂಗಡದ ಜನರು

(3) ವ್ಯವಸಾಯಗಾರರು

(4) ಗ್ರಾಮಗಳ ಆರೋಗ್ಯ ಕಾರ್ಯಕರ್ತರು

(ಉತ್ತರ:-1)

34. ವಿತ್ತೀಯ ಜವಾಬ್ದಾರಿ ಮತ್ತು ಬಜೆಟ್ ನಿರ್ವಹಣಾ ಅಧಿನಿಯಮವು (FRBMA) ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ

(1) ವಿತ್ತೀಯ ಕೊರತೆಗೆ ಮಾತ್ರ

(2) ರೆವೆನ್ಯೂ ಕೊರತೆಗೆ ಮಾತ್ರ

(3) ವಿತ್ತೀಯ ಹಾಗೂ ರೆವೆನ್ಯೂ ಕೊರತೆಗಳೆರಡಕ್ಕೂ

(4) ವಿತ್ತೀಯ ಅಥವಾ ರೆವೆನ್ಯೂ ಇವೆರಡು ಕೊರತೆಗಳಿಗೂ ಅಲ್ಲ

(ಉತ್ತರ:-3)

35. 10 ನೇ ಪಂಚವಾರ್ಷಿಕ ಯೋಜನೆಯ (2002-2006) ಮೊದಲ ನಾಲ್ಕು ವರ್ಷಗಳಲ್ಲಿ ಕೃಷಿ ಜಿ.ಡಿ.ಪಿ.ಯ ವಾರ್ಷಿಕ ಬೆಳವಣಿಗೆಯು

(1) 2.1%

(2) 1.5%

(3) 4.7%

(4) 4.0%

(ಉತ್ತರ:-2)

36. 1989ರ ಏಪ್ರಿಲ್ ನಲ್ಲಿ 'ಜವಾಹರ್ ರೋಜ್ ಗಾರ್ ಯೋಜನೆ'ಯನ್ನು ಆರಂಭಿಸುವುದಕ್ಕಾಗಿ ಚಾಲ್ತಿಯಲ್ಲಿದ್ದ ಯಾವ ಎರಡು ಕಾರ್ಯಕ್ರಮಗಳನ್ನು ವಿಲೀನಗೊಳಿಸಲಾಯಿತು

(1) NREP ಮತ್ತು EGS

(2) NREP ಮತ್ತು RLEGP

(3) EGS ಮತ್ತು FEWP

(4) RLEGP ಮತ್ತು EGS

(ಉತ್ತರ:-2)

37. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿಯಾಗಿವೆ

**ನಿಶ್ಚಿತ ಹೇಳಿಕೆ (A):** ಜಿ.ಡಿ.ಪಿ.ಗೆ ಕೃಷಿ ಕ್ಷೇತ್ರದ ಕೊಡುಗೆಯು ಭಾರತದ ಸಂದರ್ಭದಲ್ಲಿ ಸತತವಾಗಿ ಕುಸಿಯುತ್ತಿದೆ

**ಕಾರಣ (R):** ಜಿ.ಡಿ.ಪಿ.ಗೆ ಸೇವೆಗಳ ಕ್ಷೇತ್ರದ ಕೊಡುಗೆಯು ಸತತವಾಗಿ ಏರುತ್ತಿದೆ

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿ ಇದೆ, ಆದರೆ R ತಪ್ಪಾಗಿದೆ

(4) A ತಪ್ಪಾಗಿದೆ, ಆದರೆ R ಸರಿ ಇದೆ

(ಉತ್ತರ:-2)

38. ಕರ್ನಾಟಕದ ಕಳಸ ಬಂಡೂರಿ ಕಾಲುವೆ ಪರಿಯೋಜನೆಯ ಕಾಮಗಾರಿ ವಿಳಂಬಗೊಳ್ಳುವುದಕ್ಕೆ ಕೆಳಕಂಡ ಯಾವ ರಾಜ್ಯದ ಆಕ್ಷೇಪಣೆಯೇ ಕಾರಣವಾಗಿದೆ

(1) ಮಹಾರಾಷ್ಟ್ರ

(2) ಗೋವ

(3) ಆಂಧ್ರ ಪ್ರದೇಶ

(4) ತಮಿಳುನಾಡು (ಉತ್ತರ:-2)

39. 11ನೇ ಪಂಚವಾರ್ಷಿಕ ಯೋಜನೆಯ ಕರಡು ನಿರೂಪಣಾ ಪತ್ರವು ಯಾವ ಅವಧಿಯನ್ನು ಒಳಗೊಳ್ಳುತ್ತದೆ

(1) 2005-10

(2) 2006-11

(3) 2007-12

(4) 2002-07

(ಉತ್ತರ:-3)

40. 2005-06ರಲ್ಲಿ ಸೇವೆಗಳ ಕ್ಷೇತ್ರವು ಜಿ.ಡಿ.ಪಿ.ಗೆ ನೀಡಿದ ಕೊಡುಗೆ

(1) 40%

(2) 54%

(3) 45%

(4) 60%

(ಉತ್ತರ:-2)

41. ಕೇಂದ್ರ ಹಣಕಾಸು ಸಚಿವರು ತಮ್ಮ 2006-07 ರ ಬಜೆಟ್ ಪ್ರಸ್ತಾವಗಳಲ್ಲಿ ಸರಕು ಮತ್ತು ಸೇವೆಗಳ ತೆರಿಗೆ (GST) ಯನ್ನು ಆರಂಭಿಸುವುದಕ್ಕೆ ಕೆಳಕಂಡ ಯಾವ ದಿನಾಂಕವನ್ನು ಗೊತ್ತುಪಡಿಸಿದ್ದಾರೆ

(1) ಏಪ್ರಿಲ್ 1, 2008

(2) ಏಪ್ರಿಲ್ 1, 2010

(3) ಏಪ್ರಿಲ್ 1, 2007

(4) ಏಪ್ರಿಲ್ 1, 2009

(ಉತ್ತರ:-2)

42. ಭೂಗೋಳ ಶಾಸ್ತ್ರದ ಹಿನ್ನೆಲೆಯಲ್ಲಿ "ಡೋಲ್ ಡ್ರಮ್"ಗಳು ಎಲ್ಲಿ ಉಂಟಾಗುತ್ತವೆ

(1) ಧ್ರುವ ಪ್ರದೇಶಗಳಲ್ಲಿ

(2) ಉಷ್ಣವಲಯದ ಪ್ರದೇಶಗಳಲ್ಲಿ

(3) ಸಮಶೀತೋಷ್ಣ ಪ್ರದೇಶಗಳಲ್ಲಿ

(4) ಸಮಭಾಜಕ ವೃತ್ತ ಪ್ರದೇಶಗಳು

(ಉತ್ತರ:-4)

43. ಸಮುದ್ರದ ಉಪ್ಪನ್ನು (ಅಡುಗೆ ಉಪ್ಪು) ಬಹುದೊಡ್ಡ ಪ್ರಮಾಣದಲ್ಲಿ ಉತ್ಪಾದಿಸುವ ರಾಜ್ಯ ಯಾವುದು

(1) ಪಶ್ಚಿಮ ಬಂಗಾಳ

(2) ಗುಜರಾತ್

(3) ಆಂಧ್ರ ಪ್ರದೇಶ

(4) ಒರಿಸ್ಸಾ

(ಉತ್ತರ:-2)

44. ಭಾರತದ ಕಪ್ಪು ಎರೆ ಭೂಮಿಯನ್ನು ಹೀಗೂ ಹೆಸರಿಸುತ್ತಾರೆ

(1) ಅಲ್ಲೂವಿಯಲ್

(2) ಲಾಟರೈಟ್

(3) ರೆಗರ್

(4) ಹ್ಯೂಮಸ್

(ಉತ್ತರ:-3)

45. ಒಂದು ಪ್ರದೇಶದ ವಾತಾವರಣವನ್ನು ಬಹುತೇಕವಾಗಿ ನಿರ್ಣಯಿಸುವ ಅಂಶ ಯಾವುದು

(1) ಭೂ ಆಕೃತಿ

(2) ಕಡಲಿನ ಸಾಮೀಪ್ಯತೆ

(3) ರೇಖಾಂಶ

(4) ಅಕ್ಷಾಂಶ

(ಉತ್ತರ:-4)

46. ಕರ್ಕಾಟಕ ಸಂಕ್ರಾಂತಿ ವೃತ್ತ ಹಾಗೂ ಮಕರ ಸಂಕ್ರಾಂತಿ ವೃತ್ತದ ನಡುವಿನ ಪ್ರದೇಶವನ್ನು ಹೀಗೆ ಕರೆಯುತ್ತಾರೆ

(1) ಫ್ರಿಜಿಡ್ ವಲಯ

(2) ಟಾರಿಡ್ ವಲಯ

(3) ಟೆಂಪರೇಟ್ ವಲಯ

(4) ಹ್ಯುಮಿಡ್ ವಲಯ

(ಉತ್ತರ:-2)

47. ಪಟ್ಟಿ ಬೆಳೆ ಪದ್ಧತಿಯನ್ನು ಬಹುಮುಖ್ಯವಾಗಿ ಕೆಳಗಿನ ಯಾವ ಅಂಶವನ್ನು ನಿಯಂತ್ರಿಸುವ ದೃಷ್ಟಿಯಿಂದ ಅನುಸರಿಸಲಾಗುತ್ತದೆ

(1) ಭೂಸವಕಳಿ

(2) ಮಣ್ಣಿನ ಫಲವತ್ತತೆ

(3) ಕೀಟಪೀಡೆ

(4) ನೀರಿನ ನಷ್ಟ

(ಉತ್ತರ:-1)

48. ಕೊಲ್ಕತ್ತ ನಗರವನ್ನು ಸ್ಥಾಪಿಸಿದವರು

(1) ವಿಲಿಯಂ ಬೆಂಟಿಕ್

(2) ಲಾರ್ಡ್ ಹೇಸ್ಟಿಂಗ್

(3) ಜಾಬ್ ಚಾರ್ನಾಕ್

(4) ಲಾರ್ಡ್ ಆ್ಯಷ್ಲಿ

(ಉತ್ತರ:-3)

49. ಮ್ಯಾನ್ ಗ್ರೋವ್ ಸಸ್ಯಾವಳಿಯ ಅತ್ಯಧಿಕ ಪ್ರಮಾಣ ಎಲ್ಲಿ ಕಾಣುತ್ತದೆ

(1) ತೀರ ಪ್ರದೇಶಗಳು

(2) ಮರುಭೂಮಿ ಪ್ರದೇಶಗಳು

(3) ಉಬ್ಬರವಿಳಿತ ಪ್ರಭಾವದ ನದಿಗಳು

(4) ಪರ್ವತದ ಇಳಿಜಾರುಗಳು

(ಉತ್ತರ:-3)

50. ಬಹುತೇಕ ಖನಿಜ ಅದಿರುಗಳನ್ನು ಭಾರತದ ಯಾವ ಬಂದರಿನಿಂದ ರಫ್ತು ಮಾಡಲಾಗುತ್ತದೆ

(1) ಕೊಚ್ಚಿನ್

(2) ವಿಶಾಖಪಟ್ಟಣ

(3) ಕೊಲ್ಕೊತ್ತ

(4) ಪರಾದೀಪ್

(ಉತ್ತರ:-4)

51. ಖಾಸಿ ಮತ್ತು ಗಾರೊ ಬುಡಕಟ್ಟಿನ ಜನರು ಯಾವ ಪ್ರದೇಶದಲ್ಲಿ ಕಂಡುಬರುತ್ತಾರೆ

(1) ಅಸ್ಸಾಂ

(2) ಮೇಘಾಲಯ

(3) ಒರಿಸ್ಸಾ

(4) ಅರುಣಾಚಲ ಪ್ರದೇಶ

(ಉತ್ತರ:-2)

52. ಮರಳುಗಾಡು ಪ್ರದೇಶಗಳ ಪರ್ವತ ಸಮೂಹಗಳ ಪಕ್ಕದಲ್ಲಿರುವ ಯಾವ ಬಂಡೆ ನೆಲಗಳ ಬಯಲಿನಲ್ಲಿ ಸಮತಲನ ಕಂಡು ಬರುತ್ತದೆ

(1) ಪಡಿಪ್ಲೈನ್ ಗಳು

(2) ಪ್ಯಾನ್ ಪ್ಲೈನ್ ಗಳು

(3) ಬಜಾಡ

(4) ಪಿನಿಪ್ಲೈನ್ ಗಳು

(ಉತ್ತರ:-1)

53. ಭೂಮಿಯ ಮೇಲ್ಮೈಗೆ ಹತ್ತಿರದಲ್ಲಿ ಶೀತಲವಾದ ಸಾಂದ್ರ ಗಾಳಿಯ ಗುರುತ್ವಾಕರ್ಷಣ ಚಲನೆಯಿಂದ ಉಂಟಾಗುವ ಶೀತಲ ಇಳಿಜಾರು ಮುಖದ ಗಾಳಿಯನ್ನು ಹೀಗೆನ್ನುತ್ತಾರೆ

(1) ಬಿರುಗಾಳಿ

(2) ತುಫಾನು

(3) ಕೆಟಬ್ಯಾಟಿಕ್ ಗಾಳಿಗಳು

(4) ಚಂಡಮಾರುತಗಳು

(ಉತ್ತರ:-3)

54. ಸಮುದ್ರದ ಸಮಾನ ಆಳದ ಬಿಂದುಗಳ ಮೂಲಕ ಸಾಗುವ ಕಾಲ್ಪನಿಕ ರೇಖೆಗಳನ್ನು ಸೂಚಿಸುವ ಪಾರಿಭಾಷಿಕ ಪದ ಯಾವುದು

(1) ಐಸೋಹಿಪ್ಸ್

(2) ಐಸೋಪ್ಲೇತ್ಸ್

(3) ಐಸೋಬಾತ್ಸ್

(4) ಐಸೋಹೈಟ್ಸ್

(ಉತ್ತರ:-3)

55. ಭಾರತದ ಯಾವ ರಾಜ್ಯವು ಬಹುದೊಡ್ಡ ಪ್ರಮಾಣದಲ್ಲಿ ಕಲ್ಲಿದ್ದಲನ್ನು ಉತ್ಪಾದಿಸುತ್ತದೆ

(1) ಆಂಧ್ರಪ್ರದೇಶ

(2) ಒರಿಸ್ಸಾ

(3) ಮಹಾರಾಷ್ಟ್ರ

(4) ಕರ್ನಾಟಕ (ಉತ್ತರ:-4)

56. ಅತಿ ದೊಡ್ಡದಾದ ಮತ್ತು ಅತಿ ಹೆಚ್ಚು ಜನಸಂಖ್ಯೆ ಇರುವ ದ್ವೀಪವು ಯಾ ನದಿಯಲ್ಲಿದೆ

(1) ಬ್ರಹ್ಮಪುತ್ರ

(2) ಅಮೆಜಾನ್

(3) ಮಿಸ್ಸೋರಿ

(4) ಗಂಗಾ

(ಉತ್ತರ:-1)

57. ಭಾರತದ ಕೆಳಗಿನ ಯಾವ ಸಂಸ್ಥೆಯು ಟೋಪೋಗ್ರಾಫಿಕಲ್ ಭೂಪಟಗಳನ್ನು ಸಿದ್ಧಪಡಿಸುತ್ತದೆ

(1) ಜಿಯೊಲಾಜಿಕಲ್ ಸರ್ವೆ ಆಫ್ ಇಂಡಿಯಾ

(2) ಸರ್ವೆ ಆಫ್ ಇಂಡಿಯಾ

(3) ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಏಜನ್ಸಿ

(4) ಇಂಡಿಯನ್ ಮೆಟಿರಿಯೋಲಾಜಿಕಲ್ ಸರ್ವೆ

(ಉತ್ತರ:-2)

58. ಭಾರತದ ಯಾವ ರಾಜ್ಯವು ಅತ್ಯಧಿಕ ಪ್ರಮಾಣದಲ್ಲಿ ತಂಬಾಕು ಬೆಳೆಯುತ್ತದೆ

(1) ಮಹಾರಾಷ್ಟ್ರ

(2) ತಮಿಳುನಾಡು

(3) ಆಂಧ್ರಪ್ರದೇಶ

(4) ಕರ್ನಾಟಕ

(ಉತ್ತರ:-3)

59. ವನ್ಯಜೀವಿ (ರಕ್ಷಣಾ) ಅಧಿನಿಯಮವನ್ನು ಯಾವ ವರ್ಷದಲ್ಲಿ ಜಾರಿಗೊಳಿಸಲಾಯಿತು

(1) 2002

(2) 1972

(3) 1980

(4) 1995

(ಉತ್ತರ:-2)

60. ನೀರನ್ನು ಧಾರಣ ಮಾಡುವ ವ್ಯಾಪ್ಯತಾ ಶಿಲಾ ಪದರವು ಹೆಸರೇನು

(1) ಆಕ್ವಿಫರ್

(2) ಅಕ್ವಿಕ್ಲೂಡ್

(3) ಅಕ್ವಿಡಕ್ಟ್

(4) ಅಕ್ವಿಲೈನ್

(ಉತ್ತರ:-1)

61. "ಆನೆಯ ದಂತದ ಅಂತರರಾಷ್ಟ್ರೀಯ ವ್ಯಾಪಾರ ಅಕ್ರಮ" ಎಂದು ಘೋಷಿಸಲಾದ ವರ್ಷ ಯಾವುದು

(1) 1995

(2) 1989

(3) 2001

(4) 1985

(ಉತ್ತರ:-2)

62. ಯಾವ ನದಿ ಸಮಭಾಜಕ ವೃತ್ತವನ್ನು ಎರಡು ಸಲ ಹಾದು ಹೋಗುತ್ತದೆ

(1) ಕಾಂಗೊ

(2) ನೈಲ್

(3) ನೈಜರ್

(4) ಟೈಗ್ರಿಸ್

(ಉತ್ತರ:-1)

63. ಕಂಪ್ಯೂಟರ್ ನಲ್ಲಿ ಬಳಸುವ ಕಾಂಪ್ಯಾಕ್ಟ್ ಡಿಸ್ಕ್ ಗಳ ಬರವಣಿಗೆ ಮತ್ತು ಓದುವಿಕೆಯನ್ನು ಮಾಡಲು ಕೆಳಕಂಡ ಸಾಧನಗಳನ್ನು ಬಳಸಲಾಗುತ್ತದೆ

(1) ಅಯಸ್ಕಾಂತೀಯ ಸೂಚಿಗಳು

(2) ಅರೆವಾಹಕ ಲೇಸರ್ ಗಳು

(3) ರೂಬಿ ಲೇಸರ್ ಗಳು

(4) ಎಲೆಕ್ಟ್ರಾನ್ ಬೀಮ್

(ಉತ್ತರ:-3)

64. ರೂಬಿ ಲೇಸರ್ ನ ಕೆಂಪು ಬಣ್ಣಕ್ಕೆ ಕಾರಣ

(1) ಅಲ್ಯೂಮಿನಿಯಮ್ ಅಯಾನುಗಳು

(2) ಸಿಲಿಕಾನ್ ಅಯಾನುಗಳು

(3) ಆಮ್ಲಜನಕ ಅಯಾನುಗಳು

(4) ಕ್ರೋಮಿಯಂ ಅಯಾನುಗಳು

(ಉತ್ತರ:-4)

65. ಭಾರತದಿಂದ ಇತ್ತೀಚೆಗೆ ಉಡಾಯಿಸಲಾದ ಜಿ.ಎಸ್.ಎಲ್.ವಿ. ಯ ಕ್ರಯೋಜನಿಕ್ ಇಂಜನ್ ಗಳು

(1) ದೇಶೀಯವಾಗಿ ತಯಾರಾದವು

(2) ಯು.ಎಸ್.ಎ. ಸಹಯೋಗದೊಂದಿಗೆ ತಯಾರಾದವು

(3) ರಷ್ಯಾದಿಂದ ಸರಬರಾಜಾದವು

(4) ಬಳಸಲಾಗಿಲ್ಲ

(ಉತ್ತರ:-3)

66. ಕೃತಕ ಮಳೆಗೆ ಬಳಸಲಾಗುವ ರಾಸಾಯನಿಕ

(1) ಸಿಲ್ವರ್ ಅಯೋಡೈಡ್

(2) ಸಿಲ್ವರ್ ನೈಟ್ರೇಟ್

(3) ಸಿಲ್ವರ್ ಕ್ಲೋರೈಡ್

(4) ಸಿಲ್ವರ್ ಬ್ರೊಮೈಡ್

(ಉತ್ತರ:-1)

67. ವಾತಾವರಣದ ಯಾವ ವಲಯದಲ್ಲಿ ಓಜೋನ್ ಪದರ ರೂಪುಗೊಳ್ಳುತ್ತದೆ

(1) ಟ್ರೋಪೋಸ್ಪಿಯರ್

(2) ಸ್ಟ್ರಾಟೋಸ್ಪಿಯರ್

(3) ಅಯನೋಸ್ಪಿಯರ್

(4) ಮೀಸೋಸ್ಪಿಯರ್

(ಉತ್ತರ:-2)

68. ಕೆಳಕಂಡ ಸಾಮಗ್ರಿಗಳನ್ನು ಅವುಗಳ ಕುದಿವ ಬಿಂದು ಆಧರಿಸಿ ಏರಿಕೆಯ ಕ್ರಮದಲ್ಲಿ ತಿಳಿಸಿ

a. ದ್ರವ ಜಲಜನಕ

b. ದ್ರವ ಸಾರಜನಕ

c. ದ್ರವ ಆಮ್ಲಜನಕ

d. ದ್ರವ ಆರ್ಗಾನ್

e. ದ್ರವ ಹೀಲಿಯಂ

(1) b, c, a, d, e

(2) d, b, c, e, a

(3) a, c, b, e, d

(4) e, a, b, d, c

(ಉತ್ತರ:-4)

69. 'ಪಾಲಿಗ್ರಾಫ್' ಎಂದರೆ

(1) ಮಾನವ ಶರೀರದ ವಿವಿಧ ಅಂಗಾಂಗಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಗ್ರಾಫ್ ಗಳ ಸೆಟ್

(2) ಸುಳ್ಳನ್ನು ಪತ್ತೆಹಚ್ಚಲು ಬಳಸಲು ಒಂದು ಉಪಕರಣ

(3) ಒಂದು ಪಾಲಿಮರ್ ಶಕ್ತಿಯನ್ನು ತಿಳಿಯಲು ಬಳಸುತ್ತಾರೆ

(4) ಒಬ್ಬ ವ್ಯಕ್ತಿಯ ವಿವಿಧ ಮನೋಭಾವನೆಯನ್ನು ತೋರಿಸುವ ಚಿತ್ರಗಳು

(ಉತ್ತರ:-2)

70. ಪ್ರೊಟೀನ್ ಮತ್ತು ಕಾರ್ಬೋಹೈಡ್ರೇಟ್ ಗಳಿಗಿಂತ ಕೊಬ್ಬುಗಳನ್ನು ಅರಗಿಸಿಕೊಳ್ಳುವುದು ಕಷ್ಟ, ಏಕೆಂದರೆ

(1) ಅವು ತುಂಬ ದೊಡ್ಡ ಹಾಗೂ ಸಂಕೀರ್ಣ ಮಾಲಿಕ್ಯೂಲ್ ಗಳಾಗಿವೆ

(2) ಅವು ಎಸ್ಟರ್ ಸಂಪರ್ಕಗಳನ್ನು ಹೊಂದಿರುತ್ತವೆ

(3) ಅವು ನೀರಿನಲ್ಲಿ ಸುಲಭವಾಗಿ ಕರಗುವುದಿಲ್ಲ

(4) ಅವು ಪ್ರಾಣಿಮೂಲದಿಂದ ಬಂದಂಥವು

(ಉತ್ತರ:-2)

71. ತಾಮ್ರ ಅಥವಾ ಕಂಚಿನಿಂದ ಮಾಡಿದ ವಸ್ತುಗಳು ಕ್ರಮೇಣ ಮಾಸಿ ಹಸಿರು ಬಣ್ಣಕ್ಕೆ ತಿರುಗುತ್ತದೆ. ಇದಕ್ಕೆ ಕಾರಣ

(1) ತಾಮ್ರದ ಸಲ್ಫೇಟ್

(2) ತಾಮ್ರದ ಕಾರ್ಬೋನೇಟ್

(3) ತಾಮ್ರದ ಆಕ್ಸೈಡ್

(4) ತಾಮ್ರದ ನೈಟ್ರೇಟ್ (ಉತ್ತರ:-3)

72. ಪಟ್ಟಿ I ರಲ್ಲಿ ಕೊಟ್ಟಿರುವ ಜೀವಸತ್ವಗಳನ್ನು ಪಟ್ಟಿ II ರಲ್ಲಿ ಕೊಟ್ಟಿರುವ ರಾಸಾಯನಿಕಗಳೊಂದಿಗೆ ಹೊಂದಿಸಿ, ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆಯ್ಕೆಮಾಡಿ

| ಪಟ್ಟಿ I | ಪಟ್ಟಿ II |
|---|---|
| A. B1 | 1. ರೈಬೋಫ್ಲೆವಿನ್ |
| B. B2 | 2. ಅಸ್ಕಾರ್ಬಿಕ್ ಆಮ್ಲ |
| C. B4 | 3. ಕಾರ್ಬೋಲಿಕ್ ಆಮ್ಲ |
| D. C | 4. ಥೈಯಾಮಿನ್ |
| | 5. ನಿಕೊಟಿಕ್ ಆಮ್ಲ ಅಥವಾ ನಿಯಾಸಿನ್ |

**ಸಂಕೇತಗಳು:**

| | A | B | C | D |
|---|---|---|---|---|
| (1) | 1 | 3 | 4 | 2 |
| (2) | 2 | 4 | 3 | 5 |
| (3) | 3 | 5 | 1 | 4 |
| (4) | 4 | 1 | 5 | 2 |

(ಉತ್ತರ:-4)

73. ಕೆಳಗಿನ ವಿವರಣೆಗಳನ್ನು ಪರಿಶೀಲಿಸಿ

a. 'ಅಲ್ಟ್ರಾ ಸೋನಿಕ್' ಎಂದರೆ , ಅತ್ಯಂತ ಕಡಿಮೆ ತರಂಗಾಂತರದ ಧ್ವನಿ ಅಲೆಗಳು

b. ಅಲ್ಟ್ರಾ ಸೋನಿಕ್ ಗಳು ನಿರ್ವಾತದಲ್ಲಿ ಪ್ರಯಾಣಿಸುವುದಿಲ್ಲ

ಮೇಲಿನ ವಿವರಣೆಗಳ ಬಗ್ಗೆ ಕೆಳಗಿನ ಯಾವ ಆಯ್ಕೆ ಸರಿಯಾಗಿದೆ

(1) a ಮಾತ್ರ ಸರಿ

(2) a ತಪ್ಪು, b ಸರಿ ಇದೆ

(3) a ಮತ್ತು b ಎರಡೂ ಸರಿ ಇವೆ ಮತ್ತು a ಯು b ಯನ್ನು ಧ್ವನಿಸುತ್ತದೆ

(4) a ಮತ್ತು b ಎರಡೂ ತಪ್ಪಾಗಿವೆ

(ಉತ್ತರ:-3)

74. ಕೆಳಗಿನವುಗಳಲ್ಲಿ ಗುಂಪಿಗೆ ಹೊರತಾದುದನ್ನು ಗುರುತಿಸಿ

(1) ಅಟ್ಲಾಂಟ

(2) ಎರಿಯಾನ್

(3) ಕೊಲಂಬಿಯಾ

(4) ಡಿಸ್ಕವರಿ (ಉತ್ತರ:-2)

75. ಕೆಳಗಿನ ವಿವರಣೆಗಳನ್ನು ಪರಿಶೀಲಿಸಿ:

a. ಭಾರತದ ದೂರ ಸಂವೇದಿ ಉಪಗ್ರಹವು (IRS) ಭೂಮಿಯಿಂದ ೮೦೦ ಕಿ.ಮೀ.ಗಳ ಮಧ್ಯಮ ಎತ್ತರದಲ್ಲಿ ಭೂಮಿಯ ಸುತ್ತ ತಿರುಗುತ್ತಿದೆ

b. ಭಾರತದ ದೂರ ಸಂವೇದಿ ಉಪಗ್ರಹವನ್ನು (IRS) ದೂರದರ್ಶನ ಕಾರ್ಯಕ್ರಮಗಳ ಪ್ರಸಾರಣಕ್ಕೆ ಬಳಸಲು ಸಾಧ್ಯವಿಲ್ಲ

ಮೇಲಿನ ವಿವರಣೆಗಳ ಬಗ್ಗೆ ಕೆಳಗಿನ ಯಾವ ಆಯ್ಕೆ ಸರಿಯಾಗಿದೆ

(1) a ಮಾತ್ರ ಸರಿ

(2) b ಮಾತ್ರ ಸರಿ

(3) a ಮತ್ತು b ಎರಡೂ ಪ್ರತ್ಯೇಕವಾಗಿ ಸರಿ ಇವೆ, ಆದರೆ b ಗೆ a ಕಾರಣವಲ್ಲ

(4) a ಮತ್ತು b ಗಳೆರಡೂ ಸರಿ ಮತ್ತು a ಯಿಂದ b ಉಂಟಾಗುತ್ತದೆ

(ಉತ್ತರ:-4)

76. ಭಾರತದಿಂದ ಉಪಗ್ರಹವನ್ನು ಹೊತ್ತೊಯ್ಯುವ ರಾಕೆಟ್ ಗಳನ್ನು ಪೂರ್ವ ಕರಾವಳಿಯಿಂದ ಉಡಾಯಿಸಲಾಗುತ್ತದೆ, ಏಕೆ

(1) ಗಾಳಿಯು ಪಶ್ಚಿಮದಿಂದ ಪೂರ್ವಕ್ಕೆ ಬೀಸುತ್ತದೆ

(2) ಭೂಮಿಯು ಪಶ್ಚಿಮದಿಂದ ಪೂರ್ವಕ್ಕೆ ಪರಿಭ್ರಮಿಸುತ್ತದೆ. ಆದ್ದರಿಂದ ಅದು ಉಪಗ್ರಹದ ವೆಲಾಸಿಟಿ ಹೆಚ್ಚಿಸುತ್ತದೆ

(3) ಪೂರ್ವ ದಿಕ್ಕನ್ನು ಪವಿತ್ರವಾದುದೆಂದು ನಂಬಿರುವುದರಿಂದ

(4) ಭೂಮಿಯು ಪೂರ್ವದಿಂದ ಪಶ್ಚಿಮಕ್ಕೆ ಚಲಿಸುತ್ತದೆ, ಇದು ರಾಕೆಟ್ಟನ್ನು ಸ್ಥಿರವಾಗಿಡುವುದಕ್ಕೆ ಸಹಾಯಕವಾಗಿದೆ

(ಉತ್ತರ:-2)

77. ಸುಡುವ ನೀರನ್ನು ಗಾಜಿನ ತಟ್ಟೆಯ ಮೇಲೆ ಸಿಂಪಡಿಸಿದಾಗ ಅದು ಬಿರುಕು ಬಿಡುತ್ತದೆ. ಆದರೆ ಲೋಹದ ತಟ್ಟೆಯ ಮೇಲೆ ಸಿಂಪಡಿಸಿದರೆ ಹೀಗಾಗುವುದಿಲ್ಲ, ಇದಕ್ಕೆ ಕಾರಣ

(1) ಲೋಹದ ಸಾಂದ್ರತೆಯು ಗಾಜಿನ ಸಾಂದ್ರತೆಗಿಂತ ಹೆಚ್ಚು

(2) ಗಾಜು ಪಾರದರ್ಶಕವಾಗಿದೆ

(3) ಗಾಜು ಒಳ್ಳೆಯ ವಾಹಕವಲ್ಲ, ತಣ್ಣಗಿನ ಬಿಂದುಗಳಲ್ಲಿ ಅದು ಕುಗ್ಗುತ್ತದೆ

(4) ಲೋಹಗಳು ಗಾಜಿನಂತಲ್ಲದೆ ಸ್ಫಟಿಕೀಯ ರಚನೆಯನ್ನು ಹೊಂದಿವೆ

(ಉತ್ತರ:-3)

78. ಪಟ್ಟಿ I ರಲ್ಲಿ ಕೊಟ್ಟಿರುವ ಏಕಮಾನಗಳನ್ನು ಪಟ್ಟಿ II ರಲ್ಲಿನ ಆ ಏಕಮಾನಗಳಲ್ಲಿ ವ್ಯಕ್ತಪಡಿಸಲಾಗುವ ತತ್ವಗಳೊಂದಿಗೆ ಹೊಂದಿಸಿ, ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆಯ್ಕೆಮಾಡಿ

| ಪಟ್ಟಿ I | ಪಟ್ಟಿ II |
|---|---|
| A. ಬಾರ್ | 1. ಕರೆಂಟ್ |
| B. ಹರ್ಟ್ಜ್ | 2. ಒತ್ತಡ |
| C. ವ್ಯಾಟ್ | 3. ದೂರ |
| D. ಪಾರ್ಸೆಕ್ | 4. ಶಕ್ತಿ |
| | 5. ಆವರ್ತಾಂಕ |

**ಸಂಕೇತಗಳು:**

| | A | B | C | D |
|---|---|---|---|---|
| (1) | 2 | 5 | 4 | 3 |
| (2) | 4 | 1 | 3 | 5 |
| (3) | 1 | 4 | 2 | 3 |
| (4) | 3 | 5 | 4 | 1 |

(ಉತ್ತರ:-1)

79. ಆಕ್ವಾ ರಿಜಿಯಾ ಚಿನ್ನವನ್ನು ಕರಗಿಸುತ್ತದೆ, ಏಕೆಂದರೆ ಅದರಲ್ಲಿ

(1) ಜಲಜನಕವಿದೆ

(2) ಆಮ್ಲಜನಕವಿದೆ

(3) ಸಾರಜನಕವಿದೆ

(4) ಕ್ಲೋರಿನ್ ಇದೆ

(ಉತ್ತರ:-4)

80. ಕೆಳಗಿನವುಗಳಲ್ಲಿ ಚರ್ಮದ ಕಾರ್ಯವನ್ನು ಕುರಿತ ಸರಿಯಾದ ವಿವರಣೆ ಯಾವುದು

(1) ರಕ್ಷಣೆ ಮಾತ್ರ ಇದರ ಕಾರ್ಯ

(2) ಇದು ದೇಹಕ್ಕೆ ಒಂದು ಆಕಾರ ನೀಡುತ್ತದೆ

(3) ಇದು ದೇಹದಿಂದ ನೀರಿನ ಅಂಶ ನಷ್ಟವಾಗದಂತೆ ನೋಡಿಕೊಳ್ಳುತ್ತದೆ

(4) ಸಂವೇದನೆ, ತಡೆಗಟ್ಟುವಿಕೆ ಮತ್ತು ಶಾಖ ನಿಯಂತ್ರಣಗಳು ಇದರ ಕಾರ್ಯ

(ಉತ್ತರ:-4)

81. ಪಟ್ಟಿ I ರಲ್ಲಿ ವಿಜ್ಞಾನಿಗಳ ಹೆಸರುಗಳಿವೆ, ಪಟ್ಟಿ II ರಲ್ಲಿ ಅವರ ಅನ್ವೇಷಣೆಗಳಿವೆ, ಇವುಗಳನ್ನು ಸರಿಯಾಗಿ ಹೊಂದಿಸಿ, ಸರಿಯಾದ ಉತ್ತರವನ್ನು ಕೆಳಗಿನ ಸಂಕೇತಗಳಿಂದ ಆಯ್ಕೆಮಾಡಿ

| ಪಟ್ಟಿ I | ಪಟ್ಟಿ II |
|---|---|
| A. ಟಿ.ಹೆಚ್.ಮೈಮನ್ | 1. ಸ್ಟೆತಾಸ್ಕೋಪ್ |
| B. ರೆನೆ ಟಿ.ಹೆಚ್.ಲೀನ್ನೆಕ್ | 2. ಹಾಲೊಗ್ರಾಂ |
| C. ಡೆನಿಸ್ ಗೇಬರ್ | 3. ಲೇಸರ್ |
| D. ಕ್ರಿಸ್ಟೋಫರ್ ಕಾಕೆರಲ್ | 4. ಹೂವರ್ ಕ್ರಾಫ್ಟ್ |
| | 5. ಮೈಕ್ರೊಸ್ಕೋಪ್ |

**ಸಂಕೇತಗಳು:**

| | A | B | C | D |
|---|---|---|---|---|
| (1) | 2 | 3 | 1 | 5 |
| (2) | 3 | 1 | 2 | 4 |
| (3) | 1 | 5 | 2 | 4 |
| (4) | 5 | 2 | 3 | 1 |

(ಉತ್ತರ:-2)

82. ವಂಶವಾಹಿಗಳು

(1) ಪ್ರೋಟೀನ್ ಸಂಶ್ಲೇಷಣೆಯನ್ನು ನಿಯಂತ್ರಿಸುತ್ತವೆಯೇ ಹೊರತು ಅನುವಂಶಿಕತೆಯನ್ನಲ್ಲ

(2) ಪ್ರೋಟೀನ್ ಸಂಶ್ಲೇಷಣೆಯನ್ನು ಮತ್ತು ಅನುವಂಶಿಕತೆಯನ್ನು ನಿಯಂತ್ರಿಸುತ್ತವೆ

(3) ಅನುವಂಶಿಕತೆಯನ್ನು ನಿಯಂತ್ರಿಸುತ್ತವೆಯೇ ಹೊರತು ಪ್ರೋಟೀನ್ ಸಂಶ್ಲೇಷಣೆಯನ್ನಲ್ಲ

(4) ಕೆಲವು ಕಿಣ್ವಗಳ ಜೀವರಾಸಾಯನಿಕ ಕ್ರಿಯೆಯನ್ನು ನಿಯಂತ್ರಿಸುತ್ತವೆ

(ಉತ್ತರ:-2)

83. ಕೊಳಚೆ ನೀರಿನಲ್ಲಿ ಸುಲಭವಾಗಿ ಕೊಳೆಯುವಂಥ ಸಾವಯವ ಪದಾರ್ಥಗಳಿರುತ್ತವೆ, ನೀರಿನ ತಾಣಗಳಲ್ಲಿ (ಸರೋವರ) ಅತಿಯಾದ ಪ್ರಮಾಣದಲ್ಲಿ ಕೊಳಚೆ ಸೇರಿದಾಗ ಮೀನುಗಳು ಸಾಯುತ್ತವೆ, ಕಾರಣವೇನೆಂದರೆ

(1) ಕೊಳಚೆಯಲ್ಲಿರುವ ಬ್ಯಾಕ್ಟೀರಿಯ ರೋಗಕಾರಕಗಳು ಮೀನುಗಳನ್ನು ಕೊಲ್ಲುತ್ತವೆ

(2) ಕೊಳಚೆಯಲ್ಲಿರುವ ಬ್ಯಾಕ್ಟೀರಿಯಾಗಳು ಮೀನುಗಳನ್ನು ಕೊಳೆಯಿಸುತ್ತವೆ

(3) ನೀರಿನಲ್ಲಿ ಕರಗಿರುವ ಆಮ್ಲಜನಕವನ್ನು ಬ್ಯಾಕ್ಟೀರಿಯಾಗಳು ಬಳಸಿಬಿಡುವುದರಿಂದ ಮೀನುಗಳು ಉಸಿರುಗಟ್ಟಿ ಸಾಯುತ್ತವೆ

(4) ಕೊಳಚೆಯಲ್ಲಿರುವ ಭಾರಲೋಹಗಳು ಮೀನಿಗೆ ವಿಷಕಾರಕವಾಗಿವೆ (ಉತ್ತರ:-3)

ಕನ್ನಡ ಜ್ಞಾನ

84. ಕೃಷಿ ಭೂಮಿಯಿಂದ ಅಧಿಕ ಪ್ರಮಾಣದ ಸಾರಜನಕವು ಕೆರೆ ಮತ್ತು ಇತರ ನೀರಿನ ತಾಣಗಳಿಗೆ ಬಿಡುಗಡೆಯಾಗುವುದರಿಂದ ಅಲ್ಲಿ ಆಲ್ಗೆ ಮತ್ತು ಜಲಸಸ್ಯಗಳು ಅಧಿಕವಾಗಿ ಬೆಳೆಯತೊಡಗುತ್ತವೆ.ಜೀವಶಾಸ್ತ್ರದಲ್ಲಿ ಈ ವಿದ್ಯಮಾನವನ್ನು ಹೀಗೆ ಕರೆಯುತ್ತಾರೆ

(1) ಸಾರಜನಕದ ನಿಶ್ಚಲೀಕರಣ

(2) ಸಾರಜನಕದ ಸೀಕ್ವೆಸ್ಟ್ರೇಷನ್

(3) ಯೂಟ್ರೋಫಿಕೇಶಷ

(4) ಡಿನೈಟ್ರಿಫಿಕೇಷನ್

(ಉತ್ತರ:-3)

85. ಆಮ್ಲ ಮಳೆಗೆ ಕಾರಣವೇನು

(1) ದಹನ ಕ್ರಿಯೆಯಲ್ಲಿ ಬಿಡುಗಡೆಯಾದ ಅನಿಲಗಳು ನೀರಿನೊಂದಿಗೆ ಸೇರುವುದು

(2) CFC ಗಳು ಅಣುಗಳನ್ನು ವಿಘಟಿಸಿ ಆಮ್ಲವನ್ನು ಉತ್ಪಾದಿಸುವಂತೆ ಮಾಡುವುದು

(3) ಗ್ರೀನ್ ಹೌಸ್ ಪರಿಣಾಮವು ವಾತಾವರಣದ ಶಾಖವನ್ನು ಹೆಚ್ಚಿಸುವುದು ಮತ್ತು ಅಧಿಕ ಮಳೆಯಾಗುವಂತೆ ಮಾಡುವುದು

(4) ಓಜೋನ್ ಪದರದಲ್ಲಿನ ರಂಧ್ರದ ಪರಿಣಾಮವಾಗಿ ವಿಕಿರಣವು ನೀರಿನೊಂದಿಗೆ ಪ್ರತಿಕ್ರಿಯಿಸುವುದು

(ಉತ್ತರ:-1)

86. ಕೆಳಗಿನ I ಮತ್ತು II ಪಟ್ಟಿಗಳನ್ನು ಹೋಲಿಸಿ ಸರಿ ಹೊಂದಾಣಿಕೆಯನ್ನು ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಆಯ್ಕೆಮಾಡಿ

| **ಪಟ್ಟಿ-I** | **ಪಟ್ಟಿ-II** |
|---|---|
| A. ಮಲೇರಿಯ | 1. ಮೂಳೆಯ ಮಜ್ಜೆ |
| B. ಫೈಲೇರಿಯ | 2. ಮಿದುಳು |
| C. ಎನ್ಸೆಫಾಲೈಟಿಸ್ | 3. ಮಾಂಸಖಂಡ |
| D. ಲುಕೇಮಿಯ | 4. ದುಗ್ಧರಸ ಪರ್ವ (Lymph node) |
| | 5. ರಕ್ತಕೋಶಗಳು |

**ಸಂಕೇತಗಳು:**

| | A | B | C | D |
|---|---|---|---|---|
| (1) | 5 | 3 | 2 | 1 |
| (2) | 5 | 4 | 2 | 1 |
| (3) | 4 | 3 | 5 | 1 |
| (4) | 5 | 4 | 1 | 2 |

(ಉತ್ತರ:-1)

87. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಾಗಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿಯಾಗಿವೆ

**ನಿಶ್ಚಿತ ಹೇಳಿಕೆ (A):** ಸಿಂಧೂ ಕಣಿವೆಯ ನಾಗರಿಕತೆಯನ್ನು ಹರಪ್ಪಾ ಸಂಸ್ಕೃತಿ ಎಂದು ಕರೆಯುತ್ತಾರೆ

**ಕಾರಣ (R):** ಹರಪ್ಪಾ ಉತ್ಖನನಗೊಂಡ ನಾಗರಿಕತೆಯ ಅತಿ ದೊಡ್ಡ ನಿವೇಶನ

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿ ಇದೆ ಆದರೆ R ತಪ್ಪಾಗಿದೆ

(4) A ಮತ್ತು R ಎರಡೂ ತಪ್ಪು

(ಉತ್ತರ:-2)

88. ಬೂದು ಬಣ್ಣದ ಮಣ್ಣಿನ ವಸ್ತುಗಳ ಸಂಸ್ಕೃತಿ (PGW) ಯನ್ನು ವೇದಕಾಲದ ಇತ್ತೀಚಿನ ಅವಧಿಗೆ ಸೇರಿದ್ದು ಎಂದು ಭಾವಿಸಲಾಗಿದೆ, ಏಕೆಂದರೆ

(1) ಇದರೊಂದಿಗೆ ಕಬ್ಬಿಣದ ಬಳಕೆಯ ಆಧಾರಗಳಿಲ್ಲ

(2) ಇದಕ್ಕೆ ಸಂಬಂಧಪಟ್ಟ ವಿಶೇಷ ರೀತಿಯ ಕುಂಭಗಾರಿಕೆಯ ಬಗ್ಗೆ ಋಗ್ವೇದದಲ್ಲಿ ಉಲ್ಲೇಖವಿದೆ

(3) ಇತ್ತೀಚಿನ ವೇದಕಾಲದ ಗ್ರಂಥಗಳ ವಸ್ತು ಸಂಸ್ಕೃತಿ ಮತ್ತು PGW ಸಂಸ್ಕೃತಿಯ ವಿವರಗಳಿಗೂ ಸಾಮ್ಯತೆ ಇದೆ

(4) ಈ ನಿವೇಶನಗಳು ಬಹುತೇಕವಾಗಿ ಸಪ್ತಸಿಂಧು ಪ್ರದೇಶದಲ್ಲಿವೆ

(ಉತ್ತರ:-3)

89. ಅಶೋಕನ ಶಾಸನಗಳ ಲಿಪಿಯನ್ನು ಯಶಸ್ವಿಯಾಗಿ ಅರ್ಥೈಸಿದವರು

(1) ಸರ್ ವಿಲಿಯಂ ಜೋನ್ಸ್

(2) ಹೆನ್ರಿ ಕೋಲ್ ಬ್ರೂಕ್

(3) ಜೇಮ್ಸ್ ಪ್ರಿನ್ಸೆಪ್

(4) ಅಲೆಕ್ಸಾಂಡರ್ ಕನಿಂಗ್ ಹ್ಯಾಂ

(ಉತ್ತರ:-3)

90. ಕ್ರಿಶ್ಚಿಯನ್ ಕಾಲದ ಆರಂಭದ ಶತಮಾನಗಳಲ್ಲಿ ದಕ್ಷಿಣ ಭಾರತದಿಂದ ರೋಮನ್ ಸಾಮ್ರಾಜ್ಯಕ್ಕೆ ವ್ಯಾಪಕವಾಗಿ ರಫ್ತಾಗುತ್ತಿದ್ದ ವಸ್ತುಗಳು

(1) ಕೃಷಿ ಸಂಬಂಧಿ ಉತ್ಪನ್ನಗಳು

(2) ಅರಣ್ಯ ಪದಾರ್ಥಗಳು

(3) ಕರಕುಶಲ ಸರಕುಗಳು

(4) ಚಿನ್ನ ಹಾಗೂ ಅಮೂಲ್ಯ ಹರಳುಗಳು

(ಉತ್ತರ:-2)

91. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಾಗಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿಯಾಗಿವೆ

**ನಿಶ್ಚಿತ ಹೇಳಿಕೆ (A):** ಗುಪ್ತರ ನಾಣ್ಯಗಳು ಸಂಗ್ರಹಿಸಿದ ರಾಶಿಗಳಲ್ಲಿ ಮತ್ತು ನಿರ್ಮಾಣ ಸ್ಥಿತಿಯಲ್ಲಿ ಕಂಡು ಬಂದಿವೆ

**ಕಾರಣ (R):** ಈ ನಾಣ್ಯಗಳನ್ನು ವಾಣಿಜ್ಯದ ಬಳಕೆಗಿಂತ ಹೆಚ್ಚಾಗಿ ಉಡುಗೊರೆಗಾಗಿ ಬಳಸಲಾಗುತ್ತಿತ್ತು

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿ ಇದೆ ಆದರೆ R ತಪ್ಪಾಗಿದೆ

(4) A ಮತ್ತು R ಎರಡೂ ತಪ್ಪು

(ಉತ್ತರ:-1)

92. ಮೆಹ್ರೌಲಿ ಸ್ಥಂಬವು

(1) ಅಲ್ಲಾವುದ್ದೀನ್ ಖಿಲ್ಜಿಯ ಸೇನಾ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ

(2) ಪ್ರಾಚೀನ ಭಾರತದ ಕುಶಲ ಕರ್ಮಿಗಳ ನೈಪುಣ್ಯಕ್ಕೆ ಸಾಕ್ಷಿಯಾಗಿದೆ

(3) ಅಶೋಕನ 'ಧಮ್ಮ'ಕ್ಕೆ ಸಾಕ್ಷಿಯಾಗಿದೆ

(4) 1857 ರ ದಂಗೆಯನ್ನು ಬ್ರಿಟಿಷರು ದಮನಗೊಳಿಸಿದ್ದಕ್ಕೆ ಸಾಕ್ಷಿಯಾಗಿದೆ

(ಉತ್ತರ:-2)

93. ಹರ್ಷನಿಗಿಂತ ಎರಡನೇ ಪುಲಿಕೇಶಿಯ ಹೆಚ್ಚಿನ ಸೇನಾ ಸಾಮರ್ಥ್ಯಕ್ಕೆ ಸಾಕ್ಷಿ ಕೆಳಕಂಡ ಯಾವುದರಲ್ಲಿ ಸಿಗುತ್ತದೆ

(1) ಹರ್ಷಚರಿತದಲ್ಲಿ ಮಾತ್ರ

(2) ಐಹೊಳೆ ಪ್ರಶಸ್ತಿಯಲ್ಲಿ

(3) ಐಹೊಳೆ ಪ್ರಶಸ್ತಿ ಹಾಗೂ ಚೀನೀಯರ ವೃತ್ತಾಂತಗಳು

(4) ಐಹೊಳೆ ಪ್ರಶಸ್ತಿ, ಹರ್ಷಚರಿತ ಮತ್ತು ಚೀನೀಯರ ವೃತ್ತಾಂತಗಳು

(ಉತ್ತರ:-3)

94. ಹೊಯ್ಸಳರ ಆಸ್ಥಾನದಲ್ಲಿ ರಚಿತವಾದ ಗದ್ಯಕರ್ಣಾಮೃತ ಎಂಬ ಸಂಸ್ಕೃತ ಗ್ರಂಥವು ಯಾವ ಪ್ರಕಾರಕ್ಕೆ ಸೇರಿದೆ

(1) ಛಂದಸ್ಸು

(2) ಕಾವ್ಯಮೀಮಾಂಸೆ

(3) ಕಲೆ ಮತ್ತು ವಾಸ್ತುಶಿಲ್ಪ

(4) ಚರಿತ್ರೆ

(ಉತ್ತರ:-4)

95. ಪಟ್ಟಿ I ರಲ್ಲಿ ಕೆಲವು ಪಟ್ಟಣಗಳ ಹೆಸರಿದೆ ಮತ್ತು ಪಟ್ಟಿ II ರಲ್ಲಿ ಈ ಪಟ್ಟಣಗಳು ಯಾವ ಪ್ರದೇಶದಲ್ಲಿವೆ ಎಂಬುದನ್ನು ಕೊಟ್ಟಿದೆ ಇವುಗಳನ್ನು ಸರಿಯಾಗಿ ಹೊಂದಿಸಿ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ

| | **ಪಟ್ಟಿ-I** | **ಪಟ್ಟಿ-II** |
|---|---|---|
| A. | ಕೊಡುಂಗಲ್ಲೂರ್ | 1. ಕೇರಳ |
| B. | ನಾಗಪಟ್ಟಿನಂ | 2. ತಮಿಳುನಾಡು |
| C. | ನಾಗಾರ್ಜುನ ಕೊಂಡ | 3. ಆಂಧ್ರಪ್ರದೇಶ |
| D. | ಸೋಮನಾಥಪುರ | 4. ಕರ್ನಾಟಕ |

**ಸಂಕೇತಗಳು:**

| | A | B | C | D |
|---|---|---|---|---|
| (1) | 1 | 2 | 3 | 4 |
| (2) | 2 | 3 | 1 | 4 |
| (3) | 2 | 1 | 3 | 4 |
| (4) | 4 | 3 | 2 | 1 |

(ಉತ್ತರ:-1)

96. ದಕ್ಷಿಣ ಭಾರತದ ಕೆಳಕಂಡ ದೊರೆಗಳ ಹೆಸರುಗಳನ್ನು ಕಾಲಾನುಕ್ರಮದಲ್ಲಿ ತಿಳಿಸಿ

a. ಹೊಯ್ಸಳ ವಿಷ್ಣುವರ್ಧನ

b. ಕಾಕತೀಯ ತ್ರಿಭುವನ ಮಲ್ಲ

c. ಕಾಕತೀಯ ಪ್ರತಾಪರುದ್ರ

d. ಹೊಯ್ಸಳ ಸೋಮೇಶ್ವರ

ಸರಿಯಾದ ಕ್ರಮ:

(1) b, a, c, d

(2) a, b, c, d

(3) c, b, a, d

(4) c, a, b, d

(ಉತ್ತರ:-1)

97. ಪ್ರಖ್ಯಾತ ವಿದ್ವಾಂಸ ಅಲ್ಬೆರೂನಿಗೆ ಆಶ್ರಯದಾತರಾಗಿದ್ದವರು

(1) ಮೊಹಮ್ಮದ್ ಘೋರಿ

(2) ಘಜ್ನಿಯ ಮೊಹಮ್ಮದ್

(3) ಅಲ್ಲಾವುದ್ದೀನ್ ಖಿಲ್ಜಿ

(4) ಮೊಹಮ್ಮದ್ ಬಿನ್ ತೊಘಲಕ್

(ಉತ್ತರ:-2)

98. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಾಗಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿಯಾಗಿವೆ

**ನಿಶ್ಚಿತ ಹೇಳಿಕೆ (A):** ಅಲ್ಲಾವುದ್ದೀನ್ ಖಿಲ್ಜಿಯು ದೆಹಲಿಯಲ್ಲಿ ಮದ್ಯಪಾನ ನಿಷೇಧವನ್ನು ಜಾರಿಗೊಳಿಸಿದ

**ಕಾರಣ (R):** ಮದ್ಯಪಾನವು ಅನೈತಿಕ ಮತ್ತು ಅರೋಗ್ಯಕ್ಕೆ ಒಳ್ಳೆಯದಲ್ಲ

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿ ಇದೆ ಆದರೆ R ತಪ್ಪಾಗಿದೆ

(4) A ಮತ್ತು R ಎರಡೂ ತಪ್ಪು

(ಉತ್ತರ:-2)

99. ನಿಶ್ಚಿತ ಹೇಳಿಕೆ A ಯನ್ನು ಕಾರಣ R ವಿವರಿಸಬೇಕಾಗಿದೆ. ಈ ಬಗ್ಗೆ ಕೆಳಕಂಡ ಯಾವ ವಿವರಣೆಗಳು ಸರಿಯಾಗಿವೆ

**ನಿಶ್ಚಿತ ಹೇಳಿಕೆ (A):** ಮೊಘಲ್ ಚಕ್ರವರ್ತಿ ಅಕ್ಬರ್ ತನಗೆ ಸುವಾರ್ತೆಗಳ ಬಗ್ಗೆ ತಿಳಿಸಿಕೊಡುವುದಕ್ಕಾಗಿ ಈ ಬಗ್ಗೆ ಚೆನ್ನಾಗಿ ತಿಳಿದಿರುವ ಇಬ್ಬರು ಪಾದರಿಗಳನ್ನು ಕಳಿಸಿಕೊಡಬೇಕೆಂದು ಗೋವಾದ ಚರ್ಚ್ ಅಧಿಕಾರಿಗಳನ್ನು ವಿನಂತಿಸಿಕೊಂಡಿದ್ದ

**ಕಾರಣ (R):** ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಗೊಳ್ಳುವ ಬಗ್ಗೆ ಕೆಲವು ಕಾಲ ಯೋಚಿಸಿದ್ದ

(1) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಮತ್ತು A ಗೆ R ಸರಿಯಾದ ವಿವರಣೆ

(2) A ಮತ್ತು R ಎರಡೂ ಪ್ರತ್ಯೇಕವಾಗಿ ಸರಿ, ಆದರೆ A ಗೆ R ಸರಿಯಾದ ವಿವರಣೆಯಲ್ಲ

(3) A ಸರಿ ಇದೆ ಆದರೆ R ತಪ್ಪಾಗಿದೆ

(4) A ಮತ್ತು R ಎರಡೂ ತಪ್ಪು

(ಉತ್ತರ:-3)

100. ಕ್ರಿಶ್ಚಿಯನ್ನರನ್ನು ಮತ್ತು ಸಾಂಬಾರ ಪದಾರ್ಥಗಳನ್ನು ಹುಡುಕಿಕೊಂಡು ತಾವು ಭಾರತಕ್ಕೆ ಹೋಗುತ್ತಿದ್ದೇವೆ ಎಂದು ಘೋಷಿಸಿದವರು ಕೆಳಗಿನವರಲ್ಲಿ ಯಾರು

(1) ಪೋರ್ಚುಗೀಸರು (2) ಡಚ್ಚರು

(3) ಫ್ರೆಂಚರು (4) ಆಂಗ್ಲರು

(ಉತ್ತರ:-1)

ಕರುನಾಡು ವಿಶ್ವ